**ಪ್ರತಿ ಹೆಣ್ಣಿಗೂ ತಾಯ್ತನ ಜೀವನದ ಪ್ರಮುಖ ಘಟ್ಟ. ಗರ್ಭ ಧರಿಸಿದ ಹೆಣ್ಣು ಒಂಬತ್ತು ತಿಂಗಳು ಮಗುವನ್ನು ಹೊತ್ತು, ಹೆತ್ತು ಹೆಣ್ತನ ಸಾರ್ಥಕ್ಯಗೊಳಿಸಲು ಬಯಸುವುದು ಸಹಜ. ಆದರೆ ಇತ್ತೀಚೆಗೆ ವಿವಿಧ ಕಾರಣಗಳಿಂದ ಕೆಲ ಗರ್ಭಿಣಿಯರಲ್ಲಿ ಒಡಲ ಕುಡಿ ಮಡಿಲಿಗೆ ಬರುವ ಮುನ್ನವೇ ಅಸುನೀಗುವ ವಿದ್ಯಮಾನ ನಡೆಯುತ್ತಿರುವುದು ಆತಂಕದ ವಿಚಾರ.**



# ಒಡಲ ಕುಡಿ ಮಡಿಲಿಗೆ ಬಾರದೇಕೆ?

**■ ಉಮಾ ವೇಣೂರು**

ಹೆಣ್ಣೆಂದರೆ ತಾಯ್ತನ. ಪ್ರತಿ ಹೆಣ್ಣು ಬಯಸುವ ಜೀವನದ ಪ್ರಮುಖ ಘಟ್ಟವೂ ಹೌದು. ಮಗುವೇ ಹೆಣ್ಣಿಗೆ ಭೂಷಣ, ಒಡಲ ಕುಡಿಯೇ ತಾಯಿಗೆ ವಿಶೇಷಣ. ಒಡಲೊಳಗೆ ಮಿಸುಕಾಡುವ ಕುಡಿ ತಾಯಿಯ ಮನದೊಳಗೆ ತರುವ ಸಂಭ್ರಮ, ಮನೆಯೊಳಗೇ ಪ್ರತಿಫಲನವಾಗುತ್ತಿರುತ್ತದೆ. ಹೆರಿಗೆ ಹೇಗೋ ಎಂಬ ದುಗುಡ, ಆತಂಕ ಮನದೊಳಗಿದ್ದರೂ ಮಗು ಹೊರಗೆ ಬಂದ ಮೇಲೆ ಎಲ್ಲ ದುರಿತಗಳೂ ಮಾಯವಾದಂಥ ಅನುಭವ, ಸಂತೃಪ್ತ ಭಾವ ಹೆಣ್ಣಿಗೆ.

‘ಅದೇನೋ ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ’ ಅಂತಾರಲ್ಲ ಹಾಗೆ ಕೆಲವು ಸಲ ಗರ್ಭದಲ್ಲಿ ಹೊತ್ತು ಜಗತ್ತಿಗೆ ಬರುವ ಮುನ್ನವೇ ಕೆಲವು ಕಂದಮ್ಮಗಳು ಇಹಲೋಕ ತ್ಯಜಿಸುತ್ತವೆ. ಆರೋಗ್ಯವಂತವಾಗಿರುವ ಗರ್ಭಿಣಿ ಪ್ರತಿ ತಿಂಗಳು ಸರಿಯಾದ ಸಮಯಕ್ಕೆ ತಜ್ಞ ವೈದ್ಯರಿಂದ ತಪಾಸಣೆ ಮಾಡಿಸಿಕೊಂಡು ಬಂದರೂ ಕೊನೆಗೆ ಹೆರಿಗೆಯ ವೇಳೆಯೋ ಅಥವಾ ಹೆರಿಗೆಗೆ ಕೆಲ ದಿನಗಳ ಮುನ್ನವೇ ಮಗುವನ್ನು ಕಳೆದುಕೊಳ್ಳಬೇಕಾದ ದುರ್ದೈವ ಎದುರಾಗುತ್ತದೆ. ಇಂಥ ಸಂದರ್ಭದಲ್ಲಿ ಹೆಣ್ಣು ‘ವಿಧಿಬರಹ’ ಎಂದು ಎದೆಗುಂದದೆ ಆತ್ಮವಿಶ್ವಾಸ ಬೆಳೆಸಿಕೊಂಡು ಬಾಳಿನಲ್ಲಿ ಧೈರ್ಯವಾಗಿ ಮುನ್ನುಗ್ಗಿ ಮತ್ತೊಂದು ಮಗು ಪಡೆಯುವ ನಿಟ್ಟಿನಲ್ಲಿ ಯೋಚನೆ ಮಾಡಬೇಕು.

ಒಂದೆರಡು ಉದಾಹರಣೆಗಳನ್ನು ಗಮನಿಸೋಣ.

ಇಪ್ಪತ್ತೈದರ ಹರೆಯದ ಬೆಂಗಳೂರಿನ ಪಲ್ಲವಿ ಮದುವೆಯಾಗಿ ಮೂರು ವರ್ಷವಾದರೂ ಮಗುವಾಗಿರಲಿಲ್ಲ. ಮನೆಯಲ್ಲಿ ಪತಿ, ಪೋಷಕರ ಆತಂಕ ಹೆಚ್ಚಾಗುತ್ತಲೇ ಒಂದು ದಿನ ಪಲ್ಲವಿ ಸಿಹಿಸುದ್ದಿ ನೀಡಿಯೇ ಬಿಟ್ಟಳು. ಗರ್ಭದಲ್ಲಿ ಜೀವಾಂಕುರವಾದ ವಿಚಾರ ತಿಳಿಯುತ್ತಲೇ ಮನೆಯಲ್ಲಿ ಸಂತಸ ಮುಗಿಲುಮುಟ್ಟುತ್ತದೆ. ಗರ್ಭಿಣಿಗೆ ಬೇಕಾದ ಎಲ್ಲ ಆರೈಕೆಗಳೂ ಕ್ರಮಬದ್ಧವಾಗಿ ನಡೆಯುತ್ತದೆ. ಕೊನೆಯ ತ್ರೈಮಾಸಿಕದಲ್ಲಿ

